# ಎಕಿಷ್ಟು ಆತುರ ರಾಯ್?



■ ಪ್ರವೀಣ ಕುಲಕರ್ಣಿ

ಬಿಳಿಬಣ್ಣದ ಜಿಂಕ್ ಕ್ರೀಮ್‌ನಿಂದ ಎದ್ದು ಕಾಣುತ್ತಿದ್ದ ತುಟಿಗಳು, ತಲೆಯ ಮೇಲೆ ಲಾಸ್ಯವಾಡುತ್ತಿದ್ದ ಗುಂಗುರು ಕೂದಲಿನ ಜಡೆಗಳು, ಆಗಾಗ ಮೈಮೇಲೆ ಎಳೆದುಕೊಳ್ಳುತ್ತಿದ್ದ ವಿವಾದಗಳು, ಫೀಲ್ಡ್‌ನಲ್ಲಿ ಗಮನ ಸೆಳೆಯುತ್ತಿದ್ದ ಆಟದ ಕೌಶಲಗಳು…

ಆಸ್ಟ್ರೇಲಿಯನ್ ಕ್ರಿಕೆಟರ್ ಆ್ಯಂಡ್ರೂ ಸೈಮಂಡ್ಸ್ ಹೆಸರು ಹೇಳಿದರೆ ಸಾಕು, ಹಲವು ನೋಟಗಳು ಮನದಂಗಳದಲ್ಲಿ ಕಿಕ್ಕಿರಿದು ಒಟ್ಟೊಟ್ಟಿಗೆ ಮೆರವಣಿಗೆ ಹೊರಡುತ್ತವೆ. ಕಾರು ಅಪಘಾತದಲ್ಲಿ ಇತ್ತೀಚೆಗೆ ಅವರು ದುರ್ಮರಣಕ್ಕೆ ಈಡಾದಾಗ ಅವರ ವಯಸ್ಸು ಬರೀ 46. ಇನ್ನೂ ದಶಕಗಳ ಕಾಲ ಬಾಳಿ ಬದುಕಬೇಕಾಗಿದ್ದ ಜೀವ ಅವರದಾಗಿತ್ತು. ಸೈಮಂಡ್ಸ್ ಎಂಬ ವ್ಯಕ್ತಿತ್ವವನ್ನು ಬೇರೆಯ ವ್ಯಕ್ತಿಗಳಂತೆ ಒಂದೇ ಮಾತಿನಲ್ಲಿ ವಿವರಿಸಲು ಸಾಧ್ಯವೇ ಇಲ್ಲ. ಕ್ರಿಕೆಟ್ ಅಂಗಳಕ್ಕೆ ಇಳಿದರೆ ಆತ ಅದ್ಭುತ ಪ್ರತಿಭಾವಂತ ಆಟಗಾರ. ಅಂಗಳದಿಂದ ಆಚೆ ಬಂದರೆ ಗಾಳ ಹಿಡಿದು ಮೀನು ಹಿಡಿಯಲು ಹೋಗಬಲ್ಲ ಚತುರ. ಮರುದಿನ ನಡೆಯಲಿರುವ ಆಟವನ್ನೂ ಮರೆತು ರಾತ್ರಿಯಿಡೀ 'ಗುಂಡು' ಹಾಕುತ್ತಾ ಕೂರಬಲ್ಲ ಮದ್ಯವ್ಯಸನಿ. ಯಾರೊಡನೆಯೇ ಆಗಲಿ, ಅಷ್ಟೇ ಏಕೆ, ಸ್ವತಃ ಆಸ್ಟ್ರೇಲಿಯನ್ ಕ್ರಿಕೆಟ್ ಮಂಡಳಿ ಜತೆಗೂ ತಗಾದೆ ತೆಗೆದು ನಿಲ್ಲಬಲ್ಲ ಜಗಳಗಂಟ. ಸಭ್ಯರ ಆಟಕ್ಕೆ ಮಸಿ ಬಳಿದ ವಿವಾದ ಎಂಬ ಕುಖ್ಯಾತಿಯನ್ನು ಗಳಿಸಿದ 'ಮಂಕಿಗೇಟ್' ಪ್ರಕರಣ ನಡೆದು ಒಂದೂವರೆಗೆ ದಶಕದ ಬಳಿಕವೂ ಅದು ಇನ್ನೂ ಸದ್ದು ಮಾಡುತ್ತಲೇ ಇದೆ.

ಕ್ರಿಕೆಟ್‌ನ ಮೂರೂ ವಿಧದ (ಟೆಸ್ಟ್, ಏಕದಿನ ಮತ್ತು ಟ್ವೆಂಟಿ–20) ಪಂದ್ಯಗಳಲ್ಲಿ 'ಭಲೆ' ಎನಿಸಿಕೊಂಡ ಆಟಗಾರರಾಗಿದ್ದವರು ಅವರು. ಮಧ್ಯಮ ಕ್ರಮಾಂಕಕ್ಕೆ ಶಕ್ತಿ ತುಂಬಿದ ಬ್ಯಾಟ್ಸ್‌ಮನ್ ಆಗಿದ್ದ ಅವರು, ಮಧ್ಯಮ ವೇಗ ಇಲ್ಲವೆ ಆಫ್ ಸ್ಪಿನ್ ಮೂಲಕ ಚೆಂಡಿನಿಂದಲೂ ಕರಾಮತ್ತು ತೋರಬಲ್ಲವರಾಗಿದ್ದರು. ಫೀಲ್ಡಿಂಗ್‌ನಲ್ಲಿ ತೋರುತ್ತಿದ್ದ ಚಾಕಚಕ್ಯತೆಯಿಂದಾಗಿ ಜಗತ್ತಿನಾದ್ಯಂತ ಅಸಂಖ್ಯ ಅಭಿಮಾನಿಗಳನ್ನೂ ಹೊಂದಿದ್ದರು. ಜಾಂಟಿ ರೋಡ್ಸ್ ಅವರಂತಹ ಪ್ರತಿಭಾನ್ವಿತರ ಸಾಲಿನಲ್ಲಿ ನಿಲ್ಲಬಲ್ಲ ಫೀಲ್ಡರ್ ಅವರಾಗಿದ್ದರು. ಎರಡು ಬಾರಿ ವಿಶ್ವಕಪ್ ಟ್ರೋಫಿ ಎತ್ತಿಹಿಡಿದ ಆಸ್ಟ್ರೇಲಿಯಾ ತಂಡದಲ್ಲಿ ಅವರೂ ಸದಸ್ಯರಾಗಿದ್ದರು.

ಭಾರತೀಯರಿಂದ ಅತಿಯಾದ ದ್ವೇಷವನ್ನೂ ಅಷ್ಟೇ ಪ್ರಮಾಣದ ಪ್ರೀತಿಯನ್ನೂ ಸಂಪಾದಿಸಿದ ಆಟಗಾರ ಸೈಮಂಡ್ಸ್. ಮಂಕಿಗೇಟ್ ವಿವಾದ (ಹರಭಜನ್‌ಸಿಂಗ್ ತಮಗೆ ಮಂಕಿ ಎಂದು ಮೂದಲಿಸಿದರೆಂದು ಅವರು ದೂರಿದ್ದರು. ಜನಾಂಗೀಯ ನಿಂದನೆ ಎಂದು ದೊಡ್ಡ ವಿವಾದ ಉಂಟಾಗಿತ್ತು) ಸ್ಫೋಟಗೊಂಡಾಗ, ಭಾರತೀಯ ಪ್ರೇಕ್ಷಕರಿಂದ 'ಗೋ ಬ್ಯಾಕ್ ಸೈಮಂಡ್ಸ್' ಎಂಬ ಪ್ರತಿರೋಧವನ್ನೂ ಅವರು ಎದುರಿಸಿದ್ದರು. ಆದರೆ, ಐಪಿಎಲ್ ಟೂರ್ನಿಯಲ್ಲಿ ಆಡಲಾರಂಭಿಸಿದ ಮೇಲೆ ದೊಡ್ಡ ಸಂಖ್ಯೆಯ ಅಭಿಮಾನಿಗಳನ್ನೂ ಸಂಪಾದಿಸಿದ್ದರು. 'ದಬಾಂಗ್' ಚಿತ್ರದ ಹಾಡಿಗೆ ಸೈಮಂಡ್ಸ್ ಹೆಜ್ಜೆ ಹಾಕಿದ ಆ ಕ್ಷಣಗಳು ಇದೀಗ ಮತ್ತೆ ವೈರಲ್ ಆಗಿದ್ದು, ಈ ಕ್ರಿಕೆಟಿಗನ ಮೇಲೆ ಭಾರತೀಯರ ಅಭಿಮಾನವನ್ನು ಎತ್ತಿ ತೋರುತ್ತದೆ.

'ಸಂಗೀತ ಮತ್ತು ನೃತ್ಯದ ಸಮತೋಲನ ಸಾಧಿಸುವುದು ಕೌತುಕದ ಕೌಶಲ. ಎಲ್ಲರೂ ಒಟ್ಟಿಗೇ ಹೆಜ್ಜೆ ಹಾಕುವುದು ಕಷ್ಟದ ಕೆಲಸ' ಎಂದು ಅವರೊಮ್ಮೆ ಹೇಳಿದ್ದರು. 'ಬಿಗ್ ಬಾಸ್–5'ರ ರಿಯಾಲಿಟಿ ಶೋದ ಭಾಗವಾಗಿ ಪ್ರೇಕ್ಷಕರನ್ನು ರಂಜಿಸಿದ್ದರು. 'ಮುನ್ನಾಭಾಯಿ ಎಂಬಿಬಿಎಸ್' ಸಿನಿಮಾದ ದೃಶ್ಯವನ್ನು ಅವರು ಮರುಸೃಷ್ಟಿಸಿ ತೋರಿದ್ದರು. 'ಶೋಲೆ'ಯ ಗಬ್ಬರ್‌ನ ಪಾತ್ರವನ್ನೂ ಅಭಿನಯಿಸಿದ್ದರು. 'ಪಾಟಿಯಾಲಾ ಹೌಸ್' ಸಿನಿಮಾದಲ್ಲೂ ಪಾತ್ರ ಮಾಡಿದ್ದರು. ಕ್ರಿಕೆಟ್ ಅಂಗಳದಿಂದ ಆಚೆಗೆ ಮನರಂಜನಾ ಜಗತ್ತಿನಲ್ಲೂ ಅವರು ಅಭಿಮಾನಿಗಳ ಪಡೆಯನ್ನು ಕಟ್ಟಿಕೊಂಡಿದ್ದರು.

ಸೈಮಂಡ್ಸ್ ಅವರ ತಂದೆ–ತಾಯಿ ಅವರಲ್ಲೊಬ್ಬರು ಆಫ್ರಿಕನ್ ಮೂಲದವರು. ಮೂರು ತಿಂಗಳ ಹಸುಗೂಸು ಆಗಿದ್ದಾಗ ಕೆನ್ ಮತ್ತು ಬಾರ್ಬರಾ ದಂಪತಿ ಅವರನ್ನು ದತ್ತು ಪಡೆದು, ಆಸ್ಟ್ರೇಲಿಯಾಕ್ಕೆ ಕರೆತಂದಿದ್ದರು. ಕ್ರಿಕೆಟ್ ಕೌಶಲ, ದತ್ತು ತಂದೆಯಿಂದ ಬಂದ ಬಳುವಳಿ. 'ರಾಯ್' ಎನ್ನುವುದು ಅವರಿಗಿದ್ದ ಪ್ರೀತಿಯ ಹೆಸರು. ಬಾಲಕನಾಗಿದ್ದಾಗ ತನ್ನ ಪ್ರೀತಿಯ ಬ್ಯಾಸ್ಕೆಟ್‌ಬಾಲ್ ಆಟಗಾರ ಲೆರಾಯ್ ಲಾಗಿನ್ಸ್ ಅವರನ್ನು ಈ ಪುಟಾಣಿ 'ರಾಯ್' ಎಂದು ಕರೆಯುತ್ತಿದ್ದನಂತೆ. ಈ ಪುಟಾಣಿ ಮುಂದೆ ದೈತ್ಯನಾಗಿ ಬೆಳೆದಾಗ 'ರಾಯ್' ಎನ್ನುವ ಪ್ರೀತಿಯ ನಾಮವೂ ಈತನಿಗೆ ಅಂಟಿಕೊಂಡಿತಂತೆ. ಏನೇ ಆಗಲಿ, ಸೈಮಂಡ್ಸ್ ಅವರದು ವರ್ಣರಂಜಿತ ಜೀವನ.

ಆಸ್ಟ್ರೇಲಿಯಾದ ವರ್ಣರಂಜಿತ ಕ್ರಿಕೆಟಿಗರ ನಿರ್ಗಮನ ಬೇಸರ ತರಿಸುವಂಥದ್ದು. ಕೆಲವೇ ತಿಂಗಳುಗಳ ಹಿಂದೆ ಶೇನ್ ವಾರ್ನ್ ಅವರ ಅಗಲಿಕೆ ಕಾಡಿತ್ತು. ಈಗ ಸೈಮಂಡ್ಸ್ ಸಹ ಬೈ ಹೇಳಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65